ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎರಡನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ||
ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.

ದೂರವಾಣಿ ಸಂಖ್ಯೆ: 080-2235778 E-mail: dwcd.est@gmail.com

ಸಂಖ್ಯೆ: e-Office file No. ಮಮಅಇ/765712/2022-23 ದಿನಾಂಕ:೩.09.2022.

<u>ಪತ್ರಿಕಾ ಪ್ರಕಟಣೆ</u>

ವಿಷಯ:- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನುರಿತ 01-ಕಾನೂನು ಸಹಾಯಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಗದಿತ ವೇತನದ ಅಡಿ ನೇಮಕ ಮಾಡಿಕೊಳ್ಳುವ ಕುರಿತು.

*****

ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಾಕಷ್ಟು ನ್ಯಾಯಾಲಯಕ್ಕೆ ಸಂಬಂಧಿಸಿದಂತೆ, ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ನ್ಯಾಯಾಲಯಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣಾ ದಿನಾಂಕಕ್ಕೂ ಮೊದಲು ಸರ್ಕಾರಿ ವಕೀಲರನ್ನು ಸಂಪರ್ಕಿಸಿ ಸರಿಯಾದ ಸಮಯದಲ್ಲಿ ನ್ಯಾಯಾಲಯವು ಕೋರುವ ಮಾಹಿತಿ/ದಾಖಲಾತಿಗಳನ್ನು ಆಂಗ್ಲ ಭಾಷೆಯಲ್ಲಿ ರಚಿಸಿ ನೀಡಬೇಕಾಗಿರುವುದರಿಂದ ಶಾಖೆಗಳ ಸಿಬ್ಬಂದಿಗಳ ಸಹಯೋಗದೊಂದಿಗೆ ಹಾಗೂ ಸರ್ಕಾರಿ ವಕೀಲರೊಂದಿಗೆ ದಿನ ನಿತ್ಯ ಸಂವಹನ ನಡೆಸಲು ಹಾಗೂ ಇಂದೀಕೃತ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ತುರ್ತು ಪ್ರಕರಣಗಳ ಕುರಿತು ಶೀಘ್ರವಾಗಿ ಕ್ರಮವಹಿಸುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಛೇರಿಗೆ ಕಾನೂನು ವಿಷಯದಲ್ಲಿ ಅನುಭವ ಹೊಂದಿರುವ ಒಬ್ಬ ಕಾನೂನು ಸಹಾಯಕರನ್ನು (ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ) ಕಾನೂನು ಪದವಿ ಹೊಂದಿರುವವರ ಸೇವೆಯನ್ನು ಮಾಸಿಕ ಗೌರವಧನ ರೂ.30,000/-(ರೂಪಾಯಿ ಮೂವತ್ತು ಸಾವಿರಗಳು ಮಾತ್ರ) ಗಳ ಮಿತಿಯೊಳಗೆ ಭರಿಸಲು ಹಾಗೂ ಉದ್ದೇಶಿಸಿ, 2022-23ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತರು ನಿಗದಿತ ನಮೂನೆಯಲ್ಲಿ ದಿನಾಂಕ:17.09.2022 ರಂದು ಸಂಜೆ 5.00 ಗಂಟೆಯ ಒಳಗೆ ಅರ್ಜಿಯನ್ನು ಸಲ್ಲಿಸುವುದು.

ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್ https://dwcd.karnataka.gov.in ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ದೂರವಾಣಿ ಸಂಖ್ಯೆ: 080-22353778 ಮೂಲಕ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಸಂಪರ್ಕಿಸಬಹುದು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ನಿಗದಿತ ಅವಧಿಯೊಳಗೆ ಸಲ್ಲಿಸಬೇಕು.

ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
2ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-01.

ಷರತ್ತುಗಳು:-

1. ಸರ್ಕಾರದಿಂದ ಅಂಗೀಕೃತಗೊಂಡ ವಿಶ್ವವಿದ್ಯಾಲಯದಲ್ಲಿ/ಲಾ ಕಾಲೇಜಿನಿಂದ ಪಡೆದ ಕಾನೂನು ಪದವೀಧರರಾಗಿರಬೇಕು.

2. ವಕೀಲರ ಬಾರ್ ಕೌನ್ಸಿಲ್‌ನಲ್ಲಿ (Enrolled) ಸೇರ್ಪಡೆಯಾಗಿರಬೇಕು (ಸಂ...........).

3. ಕಾನೂನು ಸಹಾಯಕರ ವೃತ್ತಿಯಲ್ಲಿ ಕನಿಷ್ಠ 03 ವರ್ಷಗಳ ಅನುಭವ ಹೊಂದಿರಬೇಕು.

4. ಕರ್ತವ್ಯ ಮತ್ತು ಜವಾಬ್ದಾರಿಗಳು:

a. Process of all files pertaining to court notices, Interim and final orders of the Courts, preparation of counter affidavits, filing of appeals, filing of Special Leave petitions, Correspondence with Advocate General, Government pleaders, Advocate-on Record High Court, KAT with the direction of the Legal Advisor of the Department and Superintendent of KAT Section, etc.,

b. Attending to such other legal and court matters, as may be referred to him/her by the Secretary to Government, Department of Women and Child and Welfare of Disabled and Senior Citizen, Bangalore.

c. Taking Custody of the regular/ day to day/ Current cases, as well as Pending and Closed Files. Supervising the updating of KSCPCR complaints Dashboard.

5. ಅಪೇಕ್ಷೆ ಪಡುವ ಕಾರ್ಯವಿಧಾನಗಳಿಂದ ಮಾಹಿತಿಯನ್ನು ಡೌನ್‌ಲೋಡ್, ಶೇಖರಿಸಿಕೊಳ್ಳುವ ಹಾಗೂ ಉಪಯೋಗಿಸುವ ಕಂಪ್ಯೂಟರ್ ಜ್ಞಾನವನ್ನು ಹೊಂದಿರಬೇಕು.

6. ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ನಿರರ್ಗಳವಾಗಿ ಓದಲು, ಮಾತನಾಡಲು, ಸ್ವತಂತ್ರವಾಗಿ ಪತ್ರ ವ್ಯವಹರಿಸುವ ಜ್ಞಾನ ಹೊಂದಿರಬೇಕು.

7. ಇಲಾಖೆಗೆ ಪ್ರತಿದಿನ ಹಾಜರಾಗಿ ಸೇವೆ ನಿರ್ವಹಿಸಲು ಸಿದ್ಧರಿರಬೇಕು.

8. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ವಾಸವಾಗಿರಬೇಕು.

9. ಆಧಾರ ಕಾರ್ಡ್, ಪಾನ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.

10. ಆಯ್ಕೆಯಾದವರು ಪೊಲೀಸ್ ವೆರಿಫಿಕೇಷನ್ ವರದಿಯನ್ನು ಸಲ್ಲಿಸಲು ಸಿದ್ಧರಿರಬೇಕು.

11. ಕಾನೂನು ಸಹಾಯಕ ಸೇವೆಗೆ ಪ್ರತಿ ತಿಂಗಳಿಗೆ ರೂ.30,000-00 ಗೌರವಧನ ಪಾವತಿಸಲಾಗುವುದು.

12. ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಗೌರವಧನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.

13. ಕಾನೂನು ಸಹಾಯಕರ ಸೇವೆಗೆ ಯಾವುದೇ ಮುಂಗಡ ಹಣ ನೀಡುವ ವ್ಯವಸ್ಥೆ ಇರುವುದಿಲ್ಲ.

14. ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದರ ಆಧಾರದಡಿಯಲ್ಲಿ ಗೌರವಧನವು ಕ್ರಮಬದ್ಧವಾಗಿ ಪಾವತಿಯಾಗುತ್ತದೆ. ಆದರೆ ಅನುದಾನ ಬಿಡುಗಡೆಯಲ್ಲಿ ವಿಳಂಬವಾದಲ್ಲಿ ಗೌರವಧನ ಪಾವತಿಯಲ್ಲಿ ವ್ಯತ್ಯಾಸದಲ್ಲಿ ಪರಿಹಾರವಾಗಿ ಯಾವುದೇ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ.

15. ಕಾನೂನು ಸಹಾಯಕರ ಸೇವೆಯು 2022-23 ರಿಂದ 2023-24ನೇ ಸಾಲಿನವರೆಗೆ ಜಾರಿಯಲ್ಲಿರುತ್ತದೆ. ತಮ್ಮ ಸೇವೆಯ ಕಾರ್ಯನಿರ್ವಹಣೆಯನ್ನು ಪರಿಗಣಿಸಿ ಮುಂದುವರೆಸುವ ಬಗ್ಗೆ ಇಲಾಖೆಯು ನಿರ್ಣಯಿಸುತ್ತದೆ.

16. ಕಾನೂನು ಸಹಾಯಕರ ಸೇವೆಯನ್ನು ನವೀಕರಿಸುವ/ ರದ್ದುಪಡಿಸುವ/ ಪ್ರಕಟಣೆ ತಿದ್ದುಪಡಿ ತರುವ/ ಅಥವಾ ಯಾವುದೇ ಷರತ್ತನ್ನು ಕೈಬಿಡುವ- ಸೇರಿಸುವ ಪೂರ್ಣ ಅಧಿಕಾರವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖ್ಯಸ್ಥರು ಹೊಂದಿರುತ್ತಾರೆ.

ಆಯ್ಕೆಯಾದ ಅಭ್ಯರ್ಥಿಯು ಮೇಲ್ಕಂಡ ಷರತ್ತುಗಳಿಗೆ ಬದ್ಧವಾಗಿರುತ್ತೇನೆಂದು ರೂ.100-00 ಮೌಲ್ಯದ ಇ-ಸ್ಟ್ಯಾಂಪ್ ಪೇಪರ್‌ನಲ್ಲಿ ಒಡಂಬಡಿಕೆ ಮಾಡಿಕೊಡಬೇಕು.

ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

# ಅರ್ಜಿ ನಮೂನೆ

## 2022-23ನೇ ಸಾಲಿಗೆ ಹೊರ ಗುತ್ತಿಗೆ ಗೌರವಧನದ ಅಡಿ ವಕೀಲರ ನೇಮಕಕ್ಕಾಗಿ ಅರ್ಜಿ

| ಕ್ರ. ಸಂ. | ವಿವರಣೆ | ದಾಖಲಾತಿಗಳೊಂದಿಗೆ ಮಾಹಿತಿ |
|---|---|---|
| 01 | ಅಭ್ಯರ್ಥಿಯ ಪೂರ್ಣ ಹೆಸರು | |
| 02 | ವಾಸ ಸ್ಥಳದ ಪೂರ್ಣ ವಿಳಾಸ | |
| 03 | ಎಸ್.ಎಸ್.ಎಲ್.ಸಿ. ಮತ್ತು ಕಾನೂನು ಪದವಿ ಅಂಕಪಟ್ಟಿ ಲಗತ್ತಿಸುವುದು. | |
| 04 | ಕಾನೂನು ಪದವಿ ಪ್ರಮಾಣ ಪತ್ರ | |
| 05 | ವಕೀಲರ ಬಾರ್ ಕೌನ್ಸಿಲ್‌ನಲ್ಲಿ (enroll) ಆಗಿರುವ ಬಗ್ಗೆ ಪ್ರಮಾಣ ಪತ್ರ | |
| 06 | ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸಿದ ಕನಿಷ್ಠ 04 ವರ್ಷ ಅನುಭವದ ಪತ್ರ | |
| 07 | ಆಧಾರ್ ಕಾರ್ಡ್ ಲಗತ್ತಿಸಿದೆಯೇ | |
| 08 | ಪಾನ್ ಕಾರ್ಡ್ ಲಗತ್ತಿಸಿದೆಯೇ | |
| 09 | ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ಸ್ಪಷ್ಟವಾಗಿ ಓದಲು, ಮಾತನಾಡಲು, ಸ್ವತಂತ್ರವಾಗಿ, ಲಿಖಿತವಾಗಿ ಪತ್ರ ವ್ಯವಹರಿಸುವ ಜ್ಞಾನ ಹೊಂದಿದ್ದಾರೆಯೇ | |

ಈ ಮೇಲಿನ ಕ್ರಮ ಸಂಖ್ಯೆ 01 ರಿಂದ 09 ರವರೆಗೆ ನಮೂದಿಸಿರುವ ಮಾಹಿತಿಯು ಸತ್ಯವಾಗಿರುತ್ತದೆ. ಯಾವುದೇ ಮಾಹಿತಿಯನ್ನು ರಹಸ್ಯವಾಗಿ ಇಟ್ಟಿರುವುದಿಲ್ಲವೆಂದು ದೃಢೀಕರಿಸಿದೆ ಮತ್ತು ಪ್ರಕಟಣೆಯ ಷರತ್ತುಗಳ ಕ್ರ.ಸಂ.01 ರಿಂದ ಕ್ರ.ಸಂ.17 ರವರೆಗಿನ ಷರತ್ತುಗಳಿಗೆ ಬದ್ಧರಾಗಿರುವುದಾಗಿ ಪ್ರಮಾಣೀಕರಿಸಿದೆ.

ಅಭ್ಯರ್ಥಿಗಳ ಸಹಿ

ದಿನಾಂಕ:

ಸ್ಥಳ :